## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/33/2019/ಎಆರ್ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 06/12/2021.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ, ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1 ಶ್ರೀ **ಹೆಚ್.ಎಸ್.ಚೆಲುವರಾಜು,** ಉಪ ನೋಂದಣಾಧಿಕಾರಿ, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು ಆ.ಸ.ನೌ-2 ಶ್ರೀ **ಕೆ.ಎಸ್. ಮಹದೇವಯ್ಯ** (ಪ್ರಸ್ತುತ ನಿವೃತ್ತ) ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/6601/2014/ ಡಿಆರ್ಇ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 28/09/2018.
2. ಸರ್ಕಾರದ ಆದೇಶ ಸಂಖ್ಯೆ: RD 38 MuNoSe(2) 2018, ಬೆಂಗಳೂರು, ದಿನಾಂಕ: 17/01/2019.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-33/2019, ಬೆಂಗಳೂರು ದಿನಾಂಕ: 31.01.2019.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, ದೂರುದಾರರಾದ **ಶ್ರೀಮತಿ ಪ್ರಮೋದಾದೇವಿ ಒಡೆಯರ್ ಕೋಂ ಲೇಟ್ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್,** ಮೈಸೂರು ಅರಮನೆ, ಮೈಸೂರು ಜಿಲ್ಲೆ ( ಇನ್ನು ಮುಂದೆ **ದೂರುದಾರರು** ಎಂದು ಕರೆಯಲ್ಪಡುತ್ತಾರೆ ) ರವರು ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆಯ (1) ಶ್ರೀ **ಹೆಚ್.ಎಸ್.ಚೆಲುವರಾಜು,** ಉಪ ನೋಂದಣಾಧಿಕಾರಿ, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು (2) ಶ್ರೀ **ಕೆ.ಎಸ್. ಮಹದೇವಯ್ಯ** (ಪ್ರಸ್ತುತ ನಿವೃತ್ತ) ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ ಕ್ರಮವಾಗಿ **ಆಪಾದಿತ ಸರ್ಕಾರಿ ನೌಕರ-1 ಮತ್ತು 2** ಎಂದು

ಕರೆಯಲ್ಪಡುತ್ತಾರೆ) ರವರುಗಳು ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ. 4 (ಹಳೇ ಸರ್ವೆ ನಂ. 104) ರ ವಿಸ್ತೀರ್ಣ 05 ಎಕರೆ ಭೂಮಿಗೆ ಸಂಬಂಧಿಸಿದಂತೆ ಶ್ರೀ ಶ್ರೀಕಂಠದತ್ತ ನರಸಿಂರಾಜ್ ಒಡೆಯರ್ ರವರು ಶ್ರೀ ವಿ.ಸಿ. ರಾಜೇಂದ್ರಪ್ರಸಾದ್ ರವರಿಗೆ ಬರೆದು ಕೊಟ್ಟಿದ್ದಾರೆನ್ನಲಾದ ದಿನಾಂಕ 16/02/2004 ರ ದಾನಪತ್ರವನ್ನು ಸದರಿ ಶ್ರೀ ವಿ.ಸಿ. ರಾಜೇಂದ್ರಪ್ರಸಾದ್ ರವರು ಅದೇ ದಿನ ನೋಂದಣಿಗಾಗಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿದ್ದು, 'ಮುದ್ರಾಂಕ ಶುಲ್ಕದ ಕೊರತೆ' ಯ ಕಾರಣ ನೀಡಿ ದಾಖಲೆ ಸಂಖ್ಯೆ236/2003–04 ಎಂದು ನಮೂದಿಸಿ, ಎಂಟು ವರ್ಷಗಳ ನಂತರ ಪ್ರಕರಣ ಸಂಖ್ಯೆ 222/04–05 ರಲ್ಲಿ ದಿನಾಂಕ 01/08/2005 ರ ಆದೇಶದಂತೆ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿ, ದಿನಾಂಕ 22/10/2012 ರಂದು ರೂ. 3,82,573/– ಗಳನ್ನು ಕೊರತೆ ಮುದ್ರಾಂಕ ಶುಲ್ಕ ಎಂದು ರೂ. 23,000/– ವನ್ನು ನೋಂದಣಿ ಶುಲ್ಕವೆಂದುಸದರಿ ಶ್ರೀ ವಿ.ಸಿ. ರಾಜೇಂದ್ರಪ್ರಸಾದ್ ರವರಿಂದ ಪಾವತಿಸಿಕೊಂಡು ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಯ ನಿಖರತೆಯ ಬಗ್ಗೆ ನಕ್ಷೆ ಅಥವಾ ಹದ್ದುಬಸ್ತಿನ ದಾಖಲೆಗಳನ್ನು ಪರಿಶೀಲಿಸದೆ, ಎದುರುದಾರರುಗಳು ಶ್ರೀವಿ.ಸಿ. ರಾಜೇಂದ್ರಪ್ರಸಾದ್ ರವರೊಂದಿಗೆ ಶಾಮೀಲಾಗಿ ದೂರುದಾರರ ಆಸ್ತಿಯನ್ನು ಲಪಟಾಯಿಸಲು ಸಂಚು ಹೂಡಿದ್ದಾರೆಂದು ಆರೋಪಿಸಿರುತ್ತಾರೆ.

2) ಸದರಿ ದೂರಿಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆಪಾದಿತ ಸರ್ಕಾರಿ ನೌಕರರಿಗೆ/ಎದುರುದಾರ–1 ಮತ್ತು 2 ರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ನಂತರ ಸದರಿ ಆಕ್ಷೇಪಣೆಗೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು/ಆಪಾದಿತ ಸರ್ಕಾರಿ ನೌಕರರು–1 ಮತ್ತು 2 ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1)(ii) ಮತ್ತು (iii) ರಡಿಯಲ್ಲಿ ದುರ್ನಡತೆ ಎಸಗಿರುವುದು ಕಂಡು ಬರುತ್ತದೆ.

3) ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 17/01/2019 ರಂದು ಮಾನ್ಯ ಉಪಲೋಕಾಯುಕ್ತ–2 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ,

ಸರ್ಕಾರಿ ಆದೇಶವನ್ನು ಹೊರಡಿಸಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-2 ರವರು ದಿನಾಂಕ 31/01/2019 ರಂದು ಅಪರ ನಿಬಂಧಕರು, ವಿಚಾರಣೆಗಳ-10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ನೀಡುವಂತೆ, ಉಲ್ಲೇಖ (3)ರಲ್ಲಿ ನಾಮನಿರ್ದೇಶನ ಮಾಡಿರುತ್ತಾರೆ.

4) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ದೋಷಾರೋಪಣೆ (Article of charges) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ-1 ಮತ್ತು 2 ರವರುಗಳಿಗೆ ದಿನಾಂಕ 04/07/2019 ರಂದು ಕಳುಹಿಸಲಾಗಿರುತ್ತದೆ.

## *ಅನುಬಂಧ-1*
## *ದೋಷಾರೋಪಣೆ-1*

1) ಶ್ರೀ. ಹೆಚ್.ಎಸ್.ಚೆಲುವರಾಜು, ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕ್, ಮೈಸೂರು ಜಿಲ್ಲೆ ಮತ್ತು 2) ಶ್ರೀ.ಕೆ.ಎಸ್.ಮಹದೇವಯ್ಯ [ಪ್ರಸ್ತುತ ನಿವೃತ್ತ] ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕ್, ಮೈಸೂರು ಜಿಲ್ಲೆ ಆದ ನೀವುಗಳು ಈ ಕೆಳಕಂಡ ಕರ್ತವ್ಯಲೋಪ/ದುವರ್ತನೆ ಎಸಗಿರುತ್ತೀರಿ:-

> " ಆಪಾದಿತ ಸರ್ಕಾರಿ ನೌಕರ-1 ಮತ್ತು 2 ಆದ ನೀವುಗಳು, ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ.4 (ಹಳೇ ಸರ್ವೆ ನಂ.104)ರ ವಿಸ್ತೀರ್ಣ 05 ಎಕರೆ ಭೂಮಿಗೆ ಸಂಬಂಧಿಸಿದಂತೆ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಗೆ ಬರೆದು ಕೊಟ್ಟಿದ್ದಾರೆನ್ನಲಾದ ದಿನಾಂಕ:16/02/2004ರ ದಾನಪತ್ರವನ್ನು ಸದರಿ ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರು ಅದೇ ದಿನ ನೋಂದಣಿಗಾಗಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿದ್ದು, 'ಮುದ್ರಾಂಕ ಶುಲ್ಕದ ಕೊರತೆ'ಯ ಕಾರಣ ನೀಡಿ

ದಾಖಲೆ ಸಂಖ್ಯೆ:236/2003–04 ಎಂದು ನಮೂದಿಸಿ, ಎಂಟು ವರ್ಷಗಳ ನಂತರ ಪ್ರಕರಣ ಸಂಖ್ಯೆ:222/04–05ರಲ್ಲಿ ದಿನಾಂಕ:01/08/05ರ ಆದೇಶದಂತೆ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿ, ದಿನಾಂಕ:22/10/12ರಂದು '3,82,573/–ಗಳನ್ನು ಕೊರತೆ ಮುದ್ರಾಂಕ ಶುಲ್ಕ ಎಂದು '23,000/–ವನ್ನು ನೋಂದಣಿ ಶುಲ್ಕವೆಂದು ಸದರಿ ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಂದ ಪಾವತಿಸಿಕೊಂಡು ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಯ ನಿಖರತೆಯ ಬಗ್ಗೆ ನಕ್ಷೆ ಅಥವಾ ಹದ್ದುಬಸ್ತಿನ ದಾಖಲೆಗಳನ್ನು ಪರಿಶೀಲಿಸದೇ, ಎದುರುದಾರರುಗಳು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರೊಂದಿಗೆ ಶಾಮೀಲಾಗಿ ದೂರುದಾರರ ಆಸ್ತಿಯನ್ನು ಲಪಟಾಯಿಸಲು ಸಹಕರಿಸಿ ಕರ್ತವ್ಯಲೋಪ/ದುರ್ನಡತೆ ಎಸಗಿರುತ್ತೀರಿ".

ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)(ii) & (iii)ನೇ ನಿಬಂಧನೆಯನ್ನು ಉಲ್ಲಂಘಿಸಿ, ದುರ್ನಡತೆ ಎಸಗಿದ್ದೀರಿ.

## *ಅನುಬಂಧ–2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

2. ದೂರಿನ ಸಂಕ್ಷಿಪ್ತ ವಿವರಣೆ:– ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ.4 (ಹಳೇ ಸರ್ವೆ ನಂ.104)ರ ವಿಸ್ತೀರ್ಣ 05 ಎಕರೆ ಭೂಮಿಗೆ ಸಂಬಂಧಿಸಿದಂತೆ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಗೆ ಬರೆದು

ಕೊಟ್ಟಿದ್ದಾರೆನ್ನಲಾದ ದಿನಾಂಕ:16/02/2004ರ ದಾನಪತ್ರವನ್ನು ಸದರಿ ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರು ಅದೇ ದಿನ ನೋಂದಣಿಗಾಗಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿದ್ದು, 'ಮುದ್ರಾಂಕ ಶುಲ್ಕದ ಕೊರತೆ'ಯ ಕಾರಣ ನೀಡಿ ದಾಖಲೆ ಸಂಖ್ಯೆ:236/2003–04 ಎಂದು ನಮೂದಿಸಿ, ಎಂಟು ವರ್ಷಗಳ ನಂತರ ಪ್ರಕರಣ ಸಂಖ್ಯೆ:222/04–05ರಲ್ಲಿ ದಿನಾಂಕ:01/08/05ರ ಆದೇಶದಂತೆ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿ, ದಿನಾಂಕ:22/10/12ರಂದು '3,82,573/–ಗಳನ್ನು ಕೊರತೆ ಮುದ್ರಾಂಕ ಶುಲ್ಕ ಎಂದು '23,000/–ವನ್ನು ನೋಂದಣಿ ಶುಲ್ಕವೆಂದು ಸದರಿ ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಂದ ಪಾವತಿಸಿಕೊಂಡು ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಯ ನಿಖರತೆಯ ಬಗ್ಗೆ ನಕ್ಷೆ ಅಥವಾ ಹದ್ದುಬಸ್ತಿನ ದಾಖಲೆಗಳನ್ನು ಪರಿಶೀಲಿಸದೇ, ಎದುರುದಾರರುಗಳು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರೊಂದಿಗೆ ಶಾಮೀಲಾಗಿ ದೂರುದಾರರ ಆಸ್ತಿಯನ್ನು ಲಪಟಾಯಿಸಲು ಸಂಚು ಹೂಡಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರ (ಆ.ಸ.ನೌ–1) ತಮ್ಮ ಆಕ್ಷೇಪಣೆಯಲ್ಲಿ ದೂರಿಗೆ ಸಂಬಂಧಿಸಿದ ಅವಧಿಯಲ್ಲಿ ತಾವು ಜಿಲ್ಲಾ ನೋಂದಣಾಧಿಕಾರಿಗಳ ಕೇಂದ್ರ ಸ್ಥಾನ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದು, ದಿ:21/09/12 ರಿಂದ 13/11/12ರವರೆಗೆ ಚಾಮರಾಜನಗರ ಜಿಲ್ಲೆಯ ಪ್ರಭಾರ ಜಿಲ್ಲಾ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ, ದಿನಾಂಕ:05/08/13 ರಿಂದ ಮೈಸೂರು ಜಿಲ್ಲಾ ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಪ್ರಕರಣದಲ್ಲಿ ತಾವು ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರ (ಆ.ಸ.ನೌ–1) ರವರು, ತಮ್ಮ ಆಕ್ಷೇಪಣೆಯಲ್ಲಿ

ದಸ್ತಾವೇಜನ್ನು ನೋಂದಣಿಗೆ ಹಾಜರುಪಡಿಸುವ ದಿನಾಂಕದಂದು ತಾವು ಮೈಸೂರು ಉತ್ತರ (ತಾಲ್ಲೂಕ್) ಉಪನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲವಾದ್ದರಿಂದ, ಸದರಿ ನೋಂದಣಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ತಮಗೆ ಯಾವುದೇ ಮಾಹಿತಿಯಿಲ್ಲ. ಸದರಿ ದಸ್ತಾವೇಜಿನಲ್ಲಿ ಸ್ವತ್ತಿನ ಅಪಮೌಲ್ಯವಾಗಿದ್ದರಿಂದ, ಅದನ್ನು ಅಂದಿನ ಉಪ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಣಾಧಿಕಾರಿಗಳಿಗೆ ಕರ್ನಾಟಕ ಮುದ್ರಾಂಕ ಕಾಯಿದೆ, ಕಲಂ 45(ಎ) ರೀತ್ಯಾ ಕಳುಹಿಸಿದ್ದಾರೆ. ಅಂದಿನ ಜಿಲ್ಲಾ ನೋಂದಣಾಧಿಕಾರಿಗಳು (1ನೇ ಎದುರುದಾರರಾಗಿರುವುದಿಲ್ಲ) ತಮ್ಮ

ಆದೇಶ ದಿ:01/08/05ರಲ್ಲಿ ಸದರಿ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸಿದಂತೆ ಅಪಮೌಲ್ಯದ ಹಣವನ್ನು ಸಂದಾಯ ಮಾಡಿಸಿಕೊಂಡು ದಸ್ತಾವೇಜನ್ನು ಫಲಾನುಭವಿಗೆ ಬಿಡುಗಡೆಗೊಳಿಸಿದೆಯೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಕ್ಷೇಪಣೆಯ ಅಂಶಗಳು ಸತ್ಯಕ್ಕೆ ದೂರವಾಗಿವೆ ಎಂದು ಹೇಳಿದ್ದಾರೆ.

6. ದೂರಿನ ಬಗ್ಗೆ ತನಿಖೆ ನಡೆಸಿ, ವರದಿ ಸಲ್ಲಿಸಲು ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರಿಗೆ ಆದೇಶಿಸಲಾಗಿ, ಸದರಿಯವರು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು (ರವರ ವರದಿಯನ್ನು ಸಲ್ಲಿಸಿದ್ದಾರೆ. ಸದರಿ ವರದಿಯಲ್ಲಿ – ಪ್ರಶ್ನಿತ ದಾನಪತ್ರವನ್ನು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರು ದಿ:16/02/04 ರಂದು ನೋಂದಣಿಗೆ ಹಾಜರುಪಡಿಸಿದ ಸಮಯದಲ್ಲಿ ಶ್ರೀ.ಕೆ.ಎಸ್.ಮಹಾದೇವಯ್ಯ ರವರು ಉಪನೋಂದಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಆ ಸಮಯದಲ್ಲಿ ಮೈಸೂರು ಉಪನೋಂದಣಾಧಿಕಾರಿಗಳ ಕಛೇರಿ ಗಣಕೀಕೃತವಾಗಿದ್ದರೂ, ನೋಂದಣಿ ಪ್ರಕ್ರಿಯೆಯನ್ನು ಗಣಕಯಂತ್ರದ ಮೂಲಕ ಮಾಡದೇ, ಮ್ಯಾನ್ಯುಯಲ್ ಪ್ರಕಾರ ನೋಂದಾಯಿಸಿರುವುದು ಕಂಡು ಬಂದಿದೆ. ಸದರಿ ದಾನಪತ್ರದಲ್ಲಿ ಅಪಮೌಲ್ಯ ತನಿಖೆಗಾಗಿ ಜಿಲ್ಲಾ ನೋಂದಣಾಧಿಕಾರಿಗಳು, ಮೈಸೂರು ಜಿಲ್ಲೆ ರವರಿಗೆ ದಸ್ತಾವೇಜನ್ನು ಸಲ್ಲಿಸಲಾಗಿದೆ. ಆ ಸಮಯದಲ್ಲಿ ಶ್ರೀ.ಎಂ.ಬಸವರಾಜ್ ರವರು ಜಿಲ್ಲಾ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರು ಪ್ರಕರಣ ದಾಖಲಿಸಿ, ದಾನಪತ್ರದ ಕರ್ತೃ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರಿಗೆ ನೋಟೀಸ್ ನೀಡದೇ, ದಿನಾಂಕ:01/08/05ರಂದು ಆದೇಶ ಹೊರಡಿಸಿದ್ದಾರೆ. ಮುಂದುವರೆದು, ದಾನಪತ್ರವನ್ನು ನೋಂದಣಿ ಮಾಡಲು ದಸ್ತಾವೇಜನ್ನು ಹಾಜರುಪಡಿಸಿವ ಸಂದರ್ಭದಲ್ಲಿ ಸದರಿ ಸ್ವತ್ತು ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರ ಹೆಸರಿನಲ್ಲಿ ಇಲ್ಲದಿರುವುದು ಕಂಡು ಬಂದಿದೆ. ಶ್ರೀ.ಎಂ.ಬಸವರಾಜ್, ಜಿಲ್ಲಾ ನೋಂದಣಾಧಿಕಾರಿಗಳು ರವರ ಆದೇಶದಂತೆ ದೂರಿನ 2ನೇ ಎದುರುದಾರರು ದಿನಾಂಕ:22/10/12 ರಂದು ದಾನಪತ್ರದ ಫಲಾನುಭವಿ ಶ್ರೀ.ವಿ.ಸಿ.ರಾಜೇಂದ್ರ ಪ್ರಸಾದ್ ರವರಿಂದ ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳನ್ನು ಬಡ್ಡಿ ಆಕರಿಸದೇ ಪಾವತಿಸಿಕೊಂಡು ದಸ್ತಾವೇಜನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ.

7. ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿ:16/02/04ರಲ್ಲಿ ಕಾರ್ಯನಿರ್ವಹಿಸಿದ ಉಪನೋಂದಣಾಧಿಕಾರಿಗಳಾದ ಶ್ರೀ.ಕೆ.ಎಸ್.ಮಹದೇವಯ್ಯ ಮತ್ತು ದಿನಾಂಕ:01/08/05ರಂದು ಮೈಸೂರು ಜಿಲ್ಲಾ ನೋಂದಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ಶ್ರೀ.ಎಂ.ಬಸವರಾಜ್ ರವರನ್ನು 3 ಮತ್ತು 4ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ತನಿಖಾ ವರದಿಗೆ 2 ರಿಂದ 4ನೇ ಎದುರುದಾರರ ಉತ್ತರವನ್ನು ಕೇಳಲಾಯಿತು.

8. ಎರಡನೇ (2ನೇ) ಎದುರುದಾರರು ದಿ:07/05/18ರ ಉತ್ತರದಲ್ಲಿ, ತಮ್ಮ ಆಕ್ಷೇಪಣೆಯಲ್ಲಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

9. ಮೂರನೇ (3ನೇ) ಎದುರುದಾರರು **(ಆ.ಸ.ನೌ–2)** ದಿ:21/05/18ರ ಉತ್ತರದಲ್ಲಿ ಖಾಸಗಿ ಹಾಜರಾತಿಗಾಗಿ ದಸ್ತಾವೇಜನ್ನು ಕಛೇರಿಯಲ್ಲಿ ಹಾಜರುಪಡಿಸಿಕೊಂಡು, ಹಾಜರಾತಿಯನ್ನು ಪಡೆದು ನಂತರ ಮೈಸೂರು ಅರಮನೆಗೆ ಹೋಗಿ, ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರ ಖಾಸಗಿ ಹಾಜರಾತಿ ಪ್ರಕ್ರಿಯೆಯನ್ನು ಮಾಡಿರುವುದರಿಂದ, ಕೈಬರಹದಲ್ಲಿ ನೋಂದಣಿ ಪ್ರಕ್ರಿಯೆಯನ್ನು ನಡೆಸಲಾಗಿದೆ. ದಾಖಲಾತಿಗಳಿಲ್ಲ ಎಂಬ ಕಾರಣಕ್ಕಾಗಿ ನೋಂದಣಿಯನ್ನು ತಿರಸ್ಕರಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ದಾಖಲಾತಿಗಳು ಇಲ್ಲದೇ, ನೋಂದಣಿ ಮಾಡಿದ್ದಲ್ಲಿ, ಸಂಬಂಧಪಟ್ಟವರು ಸಿವಿಲ್ ನ್ಯಾಯಾಲಯದ ಮೊರೆ ಹೋಗುವುದು ಸಾಮಾನ್ಯ ಪ್ರಕ್ರಿಯೆ ಆಗಿದೆ. ಆದ್ದರಿಂದ, ಮ್ಯಾನ್ಯುಯಲ್ ನೋಂದಣಿಯಿಂದಾಗಲೀ ಅಥವಾ ದಾಖಲಾತಿ ಪಡೆದಿಲ್ಲ ಎಂಬ ಕಾರಣಕ್ಕಾಗಲೀ, ಪ್ರಮಾದವಾಗಿಲ್ಲ. ದಾನಪತ್ರದ ನೋಂದಣಿಯಿಂದ ಸರ್ಕಾರಕ್ಕೆ ಬರಬೇಕಾದ ಆದಾಯ \ ರಾಜಸ್ವ ನಷ್ಟವಾಗಿಲ್ಲ. ದಾನಪತ್ರದ ನೋಂದಣಿಗೆ ಹಾಜರುಪಡಿಸುವಾಗ ಲಂಚದ ಪ್ರಭಾವ ಇರಲಿಲ್ಲ. ಆದ್ದರಿಂದ, ಈ ದೂರು ಏಕೆ? ಎಂದು ತಿಳಿದಿಲ್ಲವೆಂದು ಹೇಳಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–

ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಶ್ರೀ.ಪಿ.ಸಿ.ರಾಜೇಂದ್ರಪ್ರಸಾದ್ ರವರಿಗೆ ಕುರುಬರಹಳ್ಳಿ ಗ್ರಾಮದ ಸರ್ವೆ ನಂ.4 (ಹಳೆ ಸರ್ವೆ ನಂ.104) ವಿಸ್ತೀರ್ಣ 5 ಎಕರೆ ಸ್ವತ್ತಿಗೆ ಬರೆದುಕೊಟ್ಟಿದ್ದಾರೆಂದು ಹೇಳಲಾದ ದಿನಾಂಕ:16/02/2004ರ ಪ್ರಶ್ನಿತ ದಾನಪತ್ರವನ್ನು ಮೈಸೂರು (ಉತ್ತರ) ಉಪನೋಂದಣಾಧಿಕಾರಿಗಳಾಗಿದ್ದ 3ನೇ ಎದುರುದಾರರ ಮುಂದೆ ಹಾಜರುಪಡಿಸಿದೆ ಎಂಬ ಅಂಶ ನಿರ್ವಿವಾದವಾಗಿದೆ. ಸದರಿ ದಾನಪತ್ರವನ್ನು ನೋಂದಣಿ ಮಾಡಿಕೊಡಲು ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರಾಗಲು ಸಾಧ್ಯವಾಗದ ಕಾರಣ, ಉಪನೋಂದಣಾಧಿಕಾರಿಗಳೇ ಖುದ್ದಾಗಿ ತಮ್ಮ ನಿವಾಸಕ್ಕೆ ಬಂದು ನೋಂದಣಿಗೆ ಅವಶ್ಯವಿರುವ ಸಹಿಯನ್ನು ತೆಗೆದುಕೊಳ್ಳುವಂತೆ ವಿನಂತಿಸಿ ದಸ್ತಾವೇಜಿನ ಕರ್ತೃ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಉಪನೋಂದಣಾಧಿಕಾರಿಗಳಿಗೆ ನೀಡಿದ್ದಾರೆನ್ನಲಾದ ದಿನಾಂಕ:16/02/04ರ ಕೋರಿಕೆ ಪತ್ರದಲ್ಲಿ ಕಂಡು ಬಂದಿದೆ. ಖಾಸಗಿ ಹಾಜರಾತಿ ಪಡೆದಿರುವುದರಿಂದ, ದಸ್ತಾವೇಜಿನ ನೋಂದಣಿ ಪ್ರಕ್ರಿಯೆಯನ್ನು ಕೈಬರಹದಲ್ಲಿ ನಡೆಸಲಾಗಿದೆಯೆಂದು 3ನೇ ಎದುರುದಾರರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ;

11. ದಸ್ತಾವೇಜಿನಲ್ಲಿ ನಮೂದಾದ ಸ್ವತ್ತು ಅಪಮೌಲ್ಯಕ್ಕೆ ಒಳಗಾಗಿರುವುದನ್ನು ಗಮನಿಸಿ, 3ನೇ ಎದುರುದಾರರು ದಸ್ತಾವೇಜನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಅಪಮೌಲ್ಯ ತನಿಖೆಗಾಗಿ ಶಿಫಾರಸ್ಸು ಮಾಡಿ, ಕರ್ನಾಟಕ ಮುದ್ರಾಂಕ ಕಾಯಿದೆ, ಕಲಂ 45(ಎ) ರನ್ವಯ ದಸ್ತಾವೇಜಿನ ಪ್ರತಿಯನ್ನು ಮಾರುಕಟ್ಟೆ ಬೆಲೆ ನಿರ್ಧರಣಾ ಸಮಿತಿಯು ನಿರ್ಧರಿಸಿರುವ ಮಾರ್ಗಸೂಚಿ ಬೆಲೆಯೊಂದಿಗೆ 4ನೇ ಎದುರುದಾರರ ಕಛೇರಿಗೆ ಸಲ್ಲಿಸಿದ್ದಾರೆ. ಮೌಲ್ಯಮಾಪನ ಆಗುವವರೆಗೆ ಸದರಿ ದಸ್ತಾವೇಜಿಗೆ ಕ್ರಮಾಂಕ 236/2003–04ರಂತೆ ಕ್ರಮ ಸಂಖ್ಯೆಯನ್ನು ದಿನಾಂಕ:16/02/04ರಂದು ನೀಡಿರುವುದು ಕಂಡು ಬಂದಿದೆ, ದಸ್ತಾವೇಜನ್ನು ನೋಂದಣಿಗೆ ಹಾಜರುಪಡಿಸುವ ಸಂದರ್ಭದಲ್ಲಿ ಸದರಿ ಸ್ವತ್ತು ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರ ಹೆಸರಿನಲ್ಲಿರಲಿಲ್ಲ. ಕೈಬರಹದ ಆರ್‌ಟಿಸಿ (1985–86)ಯಲ್ಲಿ ಸದರಿ ಸ್ವತ್ತು 'ಪ್ಯಾಲೆಸ್' ಎಂದು ದಾಖಲಾಗಿರುವುದು ಕಂಡು ಬಂದಿದೆ. ಯಾವುದೇ ಸ್ವತ್ತನ್ನು ಪರಭಾರೆ ಮಾಡಲು ಬಯಸುವ ವ್ಯಕ್ತಿಯ ಹೆಸರಿನಲ್ಲೇ ಸದರಿ ಸ್ವತ್ತು ಇರಬೇಕು. ದೂರಿಗೆ ಸಂಬಂಧಿಸಿದ ದಸ್ತಾವೇಜನ್ನು ನೋಂದಣಿಗೆ ದಿನಾಂಕ:16/02/04ರಂದು ಹಾಜರುಪಡಿಸುವ ಸಂದರ್ಭದಲ್ಲಿ ಸ್ವತ್ತಿಗೆ ಸಂಬಂಧಿಸಿದ ಆರ್‌ಟಿಸಿ ಮುಂತಾದ ದಾಖಲೆಗಳನ್ನು ಹಾಜರುಪಡಿಸಿದ ಬಗ್ಗೆ ಕಡತದಲ್ಲಿ ದಾಖಲೆಗಳು ಲಭ್ಯವಿಲ್ಲ. ದಸ್ತಾವೇಜನ್ನು ನೋಂದಣಿಗೆ ಹಾಜರುಪಡಿಸಿದ ದಿನದಂದು ಜಾರಿಯಲ್ಲಿದ್ದ ಸುತ್ತೋಲೆ

ಸಂಖ್ಯೆ:ಆರ್‌ಡಿ.56.ಎಂಯುನೋಸ.99 ದಿನಾಂಕ:10/05/99ರಲ್ಲಿ ವಿವರಿಸಿರುವಂತೆ ಆರ್‌ಟಿಸಿ \ ಪಹಣಿಯನ್ನು ಪಡೆಯಬೇಕು. 3ನೇ ಎದುರುದಾರರು ಪಹಣಿ ಪರಿಶೀಲನೆ ಮಾಡಿದ್ದಲ್ಲಿ, ಸದರಿ ಸ್ವತ್ತು ದಾನಪತ್ರದ ಕರ್ತೃವಿನ ಹೆಸರಿನಲ್ಲಿ ಇಲ್ಲದಿರುವುದನ್ನು ಗಮನಿಸಬಹುದಾಗಿತ್ತು. ಆದ್ದರಿಂದ, ದಸ್ತಾವೇಜನ್ನು ನೋಂದಣಿಗಾಗಿ ಸ್ವೀಕರಿಸಿರುವುದು ಕರ್ನಾಟಕ ನೋಂದಣಿ ನಿಯಮಾವಳಿಗಳನ್ವಯ ಕಾನೂನುಬಾಹಿರವೆಂದು ಕಂಡು ಬರುತ್ತದೆ ಮತ್ತು ಅವಶ್ಯ ದಾಖಲೆಗಳನ್ನು ಪಡೆಯದೇ ದಸ್ತಾವೇಜಿನ ನೋಂದಣಿ ಪ್ರಕ್ರಿಯೆಯನ್ನು ಮಾಡಿರುವುದು ಕರ್ತವ್ಯ ಲೋಪವಾಗಿದೆ.

12. ನಾಲ್ಕನೇ ಎದುರುದಾರರು ತಮ್ಮ ನ್ಯಾಯಾಲಯದಲ್ಲಿ ಕರ್ನಾಟಕ ಮುದ್ರಾಂಕ ಕಾಯಿದೆ, ಕಲಂ 45(ಎ)(2)ರನ್ವಯ ದಾಖಲಿಸಿಕೊಂಡ ಪ್ರಕರಣ ಸಂಖ್ಯೆ:ಮುದ್ರಾಂಕ\45ಎ(1)\ ಮೈ.ಉತ್ತರ–222\04–05ರ ನಡವಳಿಯಲ್ಲಿ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು 2ನೇ ಪ್ರತಿವಾದಿಯಾಗಿದ್ದರು. ನೋಟೀಸ್‌ಗಳನ್ನು ನೀಡಿದ್ದರೂ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ, ಉಪನೋಂದಣಾಧಿಕಾರಿಗಳು ಸೂಚಿಸಿದ ಬೆಲೆ ಸೂಕ್ತವೆಂದು ಭಾವಿಸಿ, '2,07,920/– ಕೊರತೆ ಮುದ್ರಾಂಕ ಮತ್ತು '23,000/– ನೋಂದಣಿ ಶುಲ್ಕ, ಒಟ್ಟು '2,30,920/–ಗಳನ್ನು ಪಾವತಿ ಮಾಡಿ, ಉಪನೋಂದಣಾಧಿಕಾರಿಯವರಲ್ಲಿ ನೋಂದಣಿ ಪೂರ್ಣಗೊಳಿಸಲು ಏಕಪಕ್ಷೀಯವಾಗಿ ದಿನಾಂಕ:01/05/05ರಂದು ಆದೇಶಿಸಿದ್ದಾರೆ.

13. ನಾಲ್ಕನೇ (4ನೇ) ಎದುರುದಾರರು ದಿನಾಂಕ:01/08/05ರಂದು ಘೋಷಿಸಿದ ಆದೇಶದನ್ವಯ ಶ್ರೀ.ವಿ.ಸಿ.ರಾಜೇಂದ್ರ ಪ್ರಸಾದ್ ರವರು ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಗೆ ನೀಡಿದ ದಿ:19/10/12ರ ಆಕ್ಸಿಸ್ ಬ್ಯಾಂಕ್‌ನ ತಗಾದೆ ಹುಂಡಿ ಸಂಖ್ಯೆ:024118ನ್ನು '3,82,573/– (ಕೊರತೆ ಮುದ್ರಾಂಕದ ಮೇಲೆ '1,74,653/– ಬಡ್ಡಿ ಸೇರಿ) ಗಳಿಗೆ ಮತ್ತು ತಗಾದೆ ಹುಂಡಿ ಸಂಖ್ಯೆ:024119ನ್ನು '23,000/– ಗಳನ್ನು ಕೊರತೆ ನೋಂದಣಿ ಶುಲ್ಕ ಎಂದು ಸಲ್ಲಿಸಿರುವುದು ಕಂಡು ಬಂದಿದೆ. ಆ ಸಮಯಕ್ಕೆ ಈ ದೂರಿನ 2ನೇ ಎದುರುದಾರರು ಮೈಸೂರು ಉತ್ತರ ಉಪನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ಕಂಡು ಬಂದಿದೆ. 4ನೇ ಎದುರುದಾರರ ಆದೇಶ ದಿನಾಂಕ:01/08/05ರನ್ವಯ ಶ್ರೀ.ವಿ.ಸಿ.ರಾಜೇಂದ್ರ ಪ್ರಸಾದ್ ರವರು ನೀಡಿದ ತಗಾದೆ ಹುಂಡಿಗಳನ್ನು ಸ್ವೀಕರಿಸಿ, ಅಪಮೌಲ್ಯ ತನಿಖೆಗಾಗಿ ಬಾಕಿ ಇರಿಸಿಕೊಂಡ ದಸ್ತಾವೇಜನ್ನು ದಿನಾಂಕ:22/10/12ರಂದು

ದಸ್ತಾವೇಜು ಸಂಖ್ಯೆ:20181/2012-13 ಎಂದು 2ನೇ ಎದುರುದಾರರು ನೋಂದಣಿ ಮಾಡಿದ್ದಾರೆ. ಸದರಿ ದಸ್ತಾವೇಜನ್ನು ನೋಂದಣಿ ಮಾಡುವ ಸಮಯದಲ್ಲಿ 2ನೇ ಎದುರುದಾರರು ಸ್ವತ್ತಿನ ಬಾಬ್ತು ಪಹಣಿ ಅಥವಾ ಇತರೆ ದಾಖಲೆಯನ್ನು ಪಡೆದಿದ್ದಾರೆಂಬ ಬಗ್ಗೆ ದಾಖಲೆಗಳು ಲಭ್ಯವಿಲ್ಲ; ದಾನಪತ್ರದ ನೋಂದಣಿ ಪ್ರಕ್ರಿಯೆಯನ್ನು ದಿನಾಂಕ:22/10/12ರಂದು ಪೂರ್ಣಗೊಳಿಸುವ ಸಂದರ್ಭದಲ್ಲಿ ದಾನಪತ್ರದ ಕರ್ತೃ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು 2ನೇ ಎದುರುದಾರರ ಕಛೇರಿಯಲ್ಲಿ ಹಾಜರಾಗದಿರುವುದು ಕಂಡು ಬಂದಿದೆ. ಯಾವುದೇ ದಾಖಲೆಯನ್ನು ನೋಂದಣಿ ಮಾಡುವ ಪೂರ್ವದಲ್ಲಿ ದಾಖಲೆಯನ್ನು ಬರೆದುಕೊಡುವ ವ್ಯಕ್ತಿಯೇ ಸದರಿ ದಾಖಲೆಯನ್ನು ಬರೆದುಕೊಟ್ಟಿದ್ದಾರೆಂದು ಖಾತರಿ ಪಡಿಸಿಕೊಳ್ಳಬೇಕಾದುದು ಕರ್ನಾಟಕ ನೋಂದಣಿ ನಿಯಮಗಳನ್ವಯ ನೋಂದಣಾಧಿಕಾರಿಗಳ ಕರ್ತವ್ಯವಾಗಿದೆ. 2ನೇ ಎದುರುದಾರರು ದಾನಪತ್ರವನ್ನು ದಿನಾಂಕ:22/10/12ರಂದು ನೋಂದಣಿ ಮಾಡುವ ಸಂದರ್ಭದಲ್ಲಿ ಕರ್ನಾಟಕ ನೋಂದಣಿ ನಿಯಮಗಳ, ನಿಯಮ 73ರಡಿ ಹೇಳಲಾದ ನೋಂದಣಾಧಿಕಾರಿಗಳ ಕರ್ತವ್ಯವನ್ನು ಪಾಲನೆ ಮಾಡದಿರುವುದು ಕಂಡು ಬಂದಿದೆ. ದಾನ ಮಾಡಲಾಗುತ್ತಿರುವ ಸ್ವತ್ತಿನ ಪಹಣಿಯಲ್ಲಿ 'ಅರಮನೆ' ಎಂದು ದಾಖಲಾಗಿದ್ದರಿಂದ, ದಾನಪತ್ರದ ನೋಂದಣಿ ಸಮಯದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆಯನ್ನು ವಹಿಸಬೇಕಾದ್ದದ್ದು 2 ಮತ್ತು 3ನೇ ಎದುರುದಾರರ ಕರ್ತವ್ಯವಾಗಿದ್ದು, ಇದು ಸದರಿಯವರ ಕರ್ತವ್ಯ ಲೋಪದ ಗಂಭೀರತೆಯನ್ನು ತೋರುತ್ತದೆ;

ಪ್ರಶ್ನಿತ ದಾನಪತ್ರದಲ್ಲಿನ ವಸ್ತು ವಿಷಯ ಕುರುಬರಹಳ್ಳಿ ಸರ್ವೆ ನಂ.4 ಸ್ವತ್ತು ಸಾರ್ವಜನಿಕ ಆಸ್ತಿ (ಅರಮನೆ ಸ್ವತ್ತು) ಆಗಿರುವುದರಿಂದ, ಸದರಿ ದೂರಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಇರುವ ಕಾರಣ, ದೂರು ಸಲ್ಲಿಸುವಲ್ಲಿ ಆಗಿರುವ ಕಾಲಮಿತಿ ಬಾಧಕವನ್ನು ಮನ್ನಿಸಿದೆ.

14. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

15. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ಮತ್ತು 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

16. ಅದಲ್ಲದೆ 2 ಮತ್ತು 3ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 3ನೇ ಎದುರುದಾರರು ದಿನಾಂಕ:30/09/2013ರಂದು ನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 2 ಮತ್ತು 3ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಲಾಗಿತ್ತು.

17. ಆಪಾದಿತ ಸರ್ಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ತನ್ನ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, **ನಿಮ್ಮಗಳ ವಿರುದ್ಧ ಈ ಮೇಲ್ಕಂಡ ಆಪಾದನೆ ಇರುತ್ತದೆ.**

4) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ-1 ಮತ್ತು 2 ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ-1 ಮತ್ತು 2 ರವರುಗಳು ದಿನಾಂಕ 08/08/2019 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement)

ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ–1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5) ಆ.ಸ.ನೌ–1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಆಪಾದಿತ ಸರ್ಕಾರಿ ನೌಕರ–1 ರವರು ದಿನಾಂಕ 08/08/2019 ರಂದು ಮತ್ತು ಆಪಾದಿತ ಸರ್ಕಾರಿ ನೌಕರ–2 ರವರು 21/10/2019 ರಂದು ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ದೋಷಾರೋಪಣೆಯಲ್ಲಿ ಆಪಾದಿಸಿರುವ ಆಪಾದನೆ ಸತ್ಯಕ್ಕೆ ದೂರವಾಗಿರುತ್ತದೆಂದು ಸಲ್ಲಿಸಿರುತ್ತಾರೆ.

7) **ಆಪಾದಿತ ಸರ್ಕಾರಿ ನೌಕರ–2 ಶ್ರೀ ಕೆ.ಎಸ್. ಮಹದೇವಯ್ಯ** (ಪ್ರಸ್ತುತ ನಿವೃತ್ತ) ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕ್, ಮೈಸೂರು ರವರು ದಿನಾಂಕ 21/10/2019 ರಂದು ತಮ್ಮ ಲಿಖಿತಹೇಳಿಕೆ ಹಾಗೂ ದಿನಾಂಕ 30/11/2019 ರಂದು ಪ್ರಮಾಣ ಪತ್ರ ಸಲ್ಲಿಸಿದ್ದು, ಶ್ರೀ ಕೆ.ಎಸ್. ಮಹದೇವಯ್ಯ, ಉಪ ನೋಂದಣಾಧಿಕಾರಿ ಇವರ ವಿರುದ್ಧ ಲೋಕಾಯುಕ್ತ ದಾಳಿ ಪ್ರಕರಣದಲ್ಲಿ ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 7/1999 ದಾಖಲಾಗಿದ್ದು, ಆರೋಪಿತರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತಲೂ ಶೇ 293.85 ರಷ್ಟು ಹೆಚ್ಚಿನ ಪ್ರಮಾಣದ ಅಕ್ರಮ ಆಸ್ತಿಯನ್ನು ಹೊಂದಿರುವುದು ತನಿಖೆಯಿಂದ ಕಂಡು ಬಂದ ಕಾರಣ, ಮೈಸೂರು 3ನೇ ಅಪರ ನ್ಯಾಯಾಲಯದ ವಿಶೇಷ ಪ್ರಕರಣ ಸಂಖ್ಯೆ 153/2002 ರಲ್ಲಿ ಆರೋಪವು ಸಾಬೀತಾಗಿ ದಂಡನೆಯನ್ನು ವಿಧಿಸಿದ ನಂತರ, ಸರ್ಕಾರವು ಆದೇಶ ಸಂಖ್ಯೆ; ಕಂಇ 24 ಮುನೋಸೇ (1) 2013 ಬೆಂಗಳೂರು ದಿನಾಂಕ 26/10/2013 ರಂತೆ ಶ್ರೀ ಕೆ.ಎಸ್. ಮಹದೇವಯ್ಯ, ಹಿರಿಯ ಉಪನೋಂದನಾಧಿಕಾರಿ, ಉಪನೊಂದಣಿ ಕಛೇರಿ, ಬನ್ನೂರು ಇವರನ್ನು ಸೇವೆಯಿಂದ ವಜಾ ಮಾಡುವ ದಂಡನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಧಿಸಿದ ಆದೇಶದ ಪ್ರತಿಯನ್ನು ಲಗತ್ತಿಸಿ ತಾವು ಸರ್ಕಾರದ ಆದೇಶದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅಥವಾ ಇನಾವುದೇ ಸಂಸ್ಥೆಯಮುಂದೆ ಮೇಲ್ಮನವಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣ ಪತ್ರದ ಮೂಲಕ ದೃಢೀಕರಿಸಿ, ತಾವು ಪ್ರಸ್ತುತ ಸರ್ಕಾರಿ ನೌಕರನಾಗಿರುವುದಿಲ್ಲ ಸರ್ಕಾರದಿಂದ ಯಾವ ನಿವರತ್ತಿ ಉಪದಾನವನ್ನು ಸಹ ಪಡೆಯುತ್ತಿಲ್ಲ, ಆದಕಾರಣ ತನ್ನ ವಿರುದ್ಧ ತನಿಖೆ ನಡೆಸಲು

6/12

ಅವಕಾಶವಿರುವುದಿಲ್ಲವಾದ ಕಾರಣ, ವಿಚಾರಣೆಯನ್ನು ಕೈಬಿಡಲು ಕೋರಿದ್ದು, **ಅದರಂತೆ ದಿನಾಂಕ 24/08/2021 ರಂದು ಆಪಾದಿತ ಸರ್ಕಾರಿ ನೌಕರ-2 ಶ್ರೀ ಕೆ.ಎಸ್. ಮಹದೇವಯ್ಯ ರವರನ್ನು ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.**

8) ಆಪಾದಿತ ಸರ್ಕಾರಿನೌಕರ-1 ಶ್ರೀ **ಹೆಚ್.ಎಸ್.ಚೆಲುವರಾಜು,** ಉಪ ನೋಂದಣಾಧಿಕಾರಿ, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆರವರು ದಿನಾಂಕ 03/09/2021 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಜ್ಞಾಪನ ಮತ್ತು ಅದರೊಂದಿಗೆ ಸರ್ಕಾರಿ ಆದೇಶ ದಿನಾಂಕ 08/07/2021 ನ್ನು ಲಗತ್ತಿಸಿ ತಾನು ಹಾಲಿ ಸರ್ಕಾರಿ ನೌಕರನಾಗಿಲ್ಲವೆಂದು ಆದ್ದರಿಂದ ತನ್ನನ್ನು ವಿಚಾರಣೆಯಿಂದ ಮುಕ್ತಗೊಳಿಸಬೇಕಾಗಿ ಕೋರಿರುತ್ತಾರೆ. ಸದರಿ ಜ್ಞಾಪನ ಮತ್ತು ಸರ್ಕಾರಿ ಆದೇಶವನ್ನು ಪರಿಶೀಲಿಸಲಾಗಿ, ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 67/2006 ಕಲಂ 465, 467, 471, 166 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಯಾಂಕಿಗೆ ಸಂದಾಯದ ನಂತರ ಚಲನ್ ತಿದ್ದಿ ಸರ್ಕಾರಕ್ಕೆ ವಂಚನೆ ಮಾಡಿರುವ ಕುರಿತು ಮೊಕದ್ದಮೆ ದಾಖಲಾಗಿದ್ದು, ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಂಡ್ಯ ಪ್ರಕರಣ ಕುರಿತು ವಿಚಾರಣೆ ನಡೆಸಿದ ಮಾನ್ಯ ನ್ಯಾಯಾಲಯವು ಆರೋಪಗಳು ಸಾಬೀತಾಗಿ ಆರೋಪಿತರಿಗೆ ಶಿಕ್ಷೆಯಾದ್ದರಿಂದ ಸರ್ಕಾರದಿಂದ ದಿನಾಂ 08/07/2021 ರಂದು ಆಪಾದಿತ ಹೆಚ್.ಎಸ್. ಚೆಲುವರಾಜು ರವರನ್ನು ವಜಾಗೊಳಿಸಲಾಗಿರುತ್ತದೆ. ಆದ್ದರಿಂದ ಆಪಾದಿತ ಸರ್ಕಾರಿ ನೌಕರ-1 **ಶ್ರೀಹೆಚ್.ಎಸ್. ಚೆಲುವರಾಜು** ರವರು ಸರ್ಕಾರಿ ಸೇವೆಯಿಂದ ವಜಾಗೊಂಡಿದ್ದು ಸದರಿಯವರು ಹಾಲಿ ಸರ್ಕಾರಿ ನೌಕರರಾಗಿ ಇಲ್ಲದಿರುವುದರಿಂದ ಅವರನ್ನು ವಿಚಾರಣೆಯಿಂದ ಕೈಬಿಡುವಂತೆ ಕೋರಿಕೊಂಡಿದ್ದು, **ಅದರಂತೆ ಆಪಾದಿತ ಸರ್ಕಾರಿ ನೌಕರ-1 ಶ್ರೀ ಹೆಚ್.ಎಸ್. ಚೆಲುವರಾಜು ರವರನ್ನು ದಿನಾಂಕ 20/11/2021 ರಂದು ಸದರಿಯವರನ್ನು ವಿಚಾರಣೆಯಿಂದ ಕೈಬಿಡಲಾಗಿದೆ** ಮತ್ತು ಶ್ರೀ ಹೆಚ್.ಎಸ್. ಚೆಲುವರಾಜು ರವರು ಒಂದು ಪಕ್ಷ ಸದರಿ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿದ್ದಲ್ಲಿ ಅಥವಾ ಸದರಿಯವರು ಸರ್ಕಾರಿ ಸೇವೆಗೆ ಪುನರ್ ನೇಮಕ ಹೊಂದಿದ ಪಕ್ಷದಲ್ಲಿ ಈ ಕಛೇರಿಗೆ ಮಾಹಿತಿ ನೀಡುವಂತೆ ಶಿಸ್ತು ಪ್ರಾಧಿಕಾರಿಗಳವರಲ್ಲಿ ಕೋರಿದೆ.

No. Uplok-2/DE/33/2019/ARE-10



ವ ರ ದಿ

ಆ.ಸ.ನೌ–1 ಶ್ರೀ **ಹೆಚ್.ಎಸ್.ಚೆಲುವರಾಜು,** ಉಪ ನೋಂದಣಾಧಿಕಾರಿ, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು ಆ.ಸ.ನೌ–2 ಶ್ರೀ **ಕೆ.ಎಸ್. ಮಹದೇವಯ್ಯ** (ಪ್ರಸ್ತುತ ನಿವೃತ್ತ) ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕು, ಮೈಸೂರು ಜಿಲ್ಲೆ ರವರುಗಳು ಈಗಾಗಲೇ ಸರ್ಕಾರದ ಆದೇಶದ ಪ್ರಕಾರ ಸರ್ಕಾರಿ ಸೇವೆಯಿಂದ ದಿನಾಂಕ 08/07/2021 ಮತ್ತು 26/10/2013 ರಂದು ವಜಾಗೊಂಡಿದ್ದು ಸದರಿಯವರುಗಳು ಸರ್ಕಾರಿ ನೌಕರರುಗಳಲ್ಲವಾದ್ದರಿಂದ ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಈ ಹಂತದಲ್ಲಿ ಸ್ಥಗಿತಗೊಳಿಸಬಹುದಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

6ನೇ ಡಿಸಂಬರ್ **2021**

6/12/21

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/33/2019/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **14/12/2021**

## RECOMMENDATION

Sub:- Departmental inquiry against;

1) Sri H.S. Cheluvaraju, Sub Registrar, Mysuru North Taluk, Mysuru District;
2) Sri K.S. Mahadevaiah, Sub Registrar, Mysuru North Taluk, Mysuru District – Reg.

Ref:- 1) Govt. Order No.ಕಂಇ **38 ಮುನೋಸೇ(2) 2018,** Bengaluru dated 17/1/2019.

2) Nomination order No.UPLOK-2/DE/33/2019, Bengaluru dated 31/1/2019 of Upalokayukta, State of Karnataka, Bengaluru

3) Report dated 6/12/2021 of Additional Registrar of Enquiries-10, Karnataka Lokayukta, Bengaluru

----

The Government by its order dated 17/1/2019, initiated the disciplinary proceedings against (1) Sri H.S. Cheluvaraju, Sub Registrar, Mysuru North Taluk, Mysuru and (2) Sri K.S. Mahadevaiah, Sub Registrar, Mysuru Taluk, Mysuru (hereinafter referred to as Delinquent Government Officials 1 & 2, for short as DGO-1 & DGP-2 respectively) and entrusted the Departmental Inquiry to this Institution.

2. This Institution by Nomination Order No.UPLOK-2/DE/33/2019 Bengaluru dated 31/1/2019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them.

3. The inquiry officer has framed the following charges against DGO-1 Sri H.S. Cheluvaraju, Sub Registrar, Mysuru North Taluk, Mysuru and DGO-2 Sri K.S. Mahadevaiah, Sub Registrar, Mysuru Taluk, Mysuru:-

1) ಶ್ರೀ. ಹೆಚ್.ಎಸ್.ಚೆಲುವರಾಜು, ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕ್, ಮೈಸೂರು ಜಿಲ್ಲೆ ಮತ್ತು 2) ಶ್ರೀ.ಕೆ.ಎಸ್.ಮಹದೇವಯ್ಯ [ಪ್ರಸ್ತುತ ನಿವೃತ್ತ] ಉಪನೋಂದಣಾಧಿಕಾರಿಗಳು, ಉತ್ತರ ತಾಲ್ಲೂಕ್, ಮೈಸೂರು ಜಿಲ್ಲೆ ಆದ ನೀವುಗಳು ಈ ಕೆಳಕಂಡ ಕರ್ತವ್ಯಲೋಪ/ದುರ್ವರ್ತನೆ ಎಸಗಿರುತ್ತೀರಿ:-

"ಆಪಾದಿತ ಸರ್ಕಾರಿ ನೌಕರ-1 ಮತ್ತು 2 ಆದ ನೀವುಗಳು, ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಕುರುಬರ ಹಳ್ಳಿ ಗ್ರಾಮದ ಸರ್ವೆ ನಂ.4 (ಹಳೇ ಸರ್ವೆ ನಂ.104)ರ ವಿಸ್ತೀರ್ಣ 05 ಎಕರೆ ಭೂಮಿಗೆ ಸಂಬಂಧಿಸಿದಂತೆ ಶ್ರೀ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಗೆ ಬರೆದು ಕೊಟ್ಟಿದ್ದಾರೆನ್ನಲಾದ ದಿನಾಂಕ:16/02/2004ರ ದಾನಪತ್ರವನ್ನು ಸದರಿ ಶ್ರೀ.ವಿ.ಸಿ.ರಾಜೇಂದ್ರ ಪ್ರಸಾದ್ ರವರು ಅದೇ ದಿನ ನೋಂದಣಿಗಾಗಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿದ್ದು, 'ಮುದ್ರಾಂಕ ಶುಲ್ಕದ ಕೊರತೆ'ಯ ಕಾರಣ ನೀಡಿ ದಾಖಲೆ ಸಂಖ್ಯೆ:236/2003-04 ಎಂದು ನಮೂದಿಸಿ, ಎಂಟು ವರ್ಷಗಳ ನಂತರ ಪ್ರಕರಣ ಸಂಖ್ಯೆ:222/04-05ರಲ್ಲಿ ದಿನಾಂಕ:01/08/05ರ ಆದೇಶದಂತೆ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿ, ದಿನಾಂಕ:22/10/12ರಂದು '3,82,573/-ಗಳನ್ನು ಕೊರತೆ ಮುದ್ರಾಂಕ ಶುಲ್ಕ ಎಂದು '23,000/-ವನ್ನು ನೋಂದಣಿ ಶುಲ್ಕವೆಂದು ಸದರಿ ಶ್ರೀ.ವಿ.ಸಿ.ರಾಜೇಂದ್ರಪ್ರಸಾದ್ ರವರಿಂದ ಪಾವತಿಸಿಕೊಂಡು ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಯ ನಿಖರತೆಯ ಬಗ್ಗೆ ನಕ್ಷೆ ಅಥವಾ ಹದ್ದುಬಸ್ತಿನ ದಾಖಲೆಗಳನ್ನು ಪರಿಶೀಲಿಸದೇ, ಎದುರುದಾರರುಗಳು ಶ್ರೀ.ವಿ.ಸಿ.ರಾಜೇಂದ್ರ ಪ್ರಸಾದ್ ರವರೊಂದಿಗೆ ಶಾಮೀಲಾಗಿ ದೂರುದಾರರ ಆಸ್ತಿಯನ್ನು ಲಪಟಾಯಿಸಲು ಸಹಕರಿಸಿ ಕರ್ತವ್ಯಲೋಪ/ದುರ್ನಡತೆ ಎಸಗಿರುತ್ತೀರಿ".

ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ

ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)(ii) & (iii)ನೇ ನಿಬಂಧನೆಯನ್ನು ಉಲ್ಲಂಘಿಸಿ, ದುರ್ನಡತೆ ಎಸಗಿದ್ದೀರಿ."

4. The inquiry officer has reported that DGO-1 Sri H.S. Cheluvaraju has been dismissed from service by Order No. EV(2)-19/05-06 dated 8/7/2021 of the Inspector General of Registration and Commissioner of Stamps in Karnataka, Bengaluru in view of his conviction dated 20/3/2021 in a criminal case on the file of the Principal Civil Judge and JMFC filed in Cr. No. 2006 of Mandya West Police Station. Therefore, the inquiry officer has held that since the DGO-1 Sri H.S. Cheluvaraju has already been dismissed from service, inquiry proceedings cannot be continued against him.

5. In respect of DGO-2 Sri K.S. Mahadevaiah, the Inquiry officer has reported that he has been dismissed from service by Government Order No. Kam.E 24 Mu.No.Se (1) 2013 datcd 26/10/2013 in view of his conviction in Criminal case in Spl. Case No.153/2002 on the file of 3rd Addl. District & Sessions Judge cum Special Judge, Mysuru. Therefore, thc inquiry officer has held that since DGO-2 Sri K.S. Mahadevaiah has already been dismissed from service, inquiry proceedings against him also cannot be continued.

6. On rc-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer.

7. It is hereby recommended to the Government to accept the report of Inquiry Officer and to close the departmental inquiry against DGO-1 Sri H.S. Cheluvaraju and DGO-2 Sri K.S. Mahadevaiah in view of their dismissal from service on 8/7/2021 and 26/10/2013 respectively for the present. The Competent Authority shall intimate this institution, if the conviction of DGOs 1 & 2 or either of them is set aside by the Competent Court in any Appeal filed or to be filed by them and consequently they are reinstated into service, so as to proceed with the enquiry against them from the stage where it was stopped.

8. Action taken in the matter shall be intimated to this Authority.

Connected records are enclosed herewith.

Sd/- 14/12/21
**(JUSTICE B.S.PATIL)**
Upalokayukta,
State of Karnataka,
Bengaluru